**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ.1164/2019**

**ಪಿಡಬ್ಲೂ-1**

**ಸಿಡಬ್ಲೂ-2**

ಸಾಕ್ಷಿದಾರರ ಹೆಸರು - ಲೋಹಿತ್

ತಂದೆಯ ಹೆಸರು - ಸದಾಶಿವಪ್ಪ

ವಯಸ್ಸು - 30

ಕೆಲಸ - ವ್ಯವಸಾಯ

ವಾಸ - ಮಾಯಿಗೌಡನಹಳ್ಳಿ

**ದಿನಾಂಕ 03-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಆರೋಪಿ ನಮ್ಮ ಗ್ರಾಮದವರು ಇರುತ್ತಾರೆ. ಸುಮಾರು 4-5 ವರ್ಷದ ಹಿಂದೆ ಪೋಲಿಸರು ನಾನು ಚುಂಚನಕಟ್ಟೆ ಬಳಿ ಇದ್ದಾಗ ನನ್ನ ಸಹಿ ಪಡೆದಿರುತ್ತಾರೆ. ಯಾವ ವಿಚಾರಕ್ಕಾಗಿ ಸಹಿ ಪಡೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಮಹದೇವ ಎನ್ನುವವರು ಇದ್ದರು. ಪೋಲಿಸರು ಈ ಹಿಂದೆ ನನ್ನನ್ನು ಯಾವುದೇ ಮಹಜರ್ ಗೆ ಕರೆದಿಲ್ಲ. ಆರೋಪಿಯ ಮೇಲೆ ದಾಳಿ ನಡೆಸಿ ಯಾವುದೇ ಮದ್ಯವನ್ನು ನನ್ನ ಸಮಕ್ಷಮ ಪೋಲಿಸರು ಅಮಾನತ್ತುಪಡಿಸಿಕೊಂಡಿಲ್ಲ ಹಾಗೂ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಯಾವುದೇ ಮದ್ಯವನ್ನು ನೋಡಿದರೆ ಗುರುತಿಸಲಾಗುವುದಿಲ್ಲ. ಅಮಾನತ್ತು ಮಹಜರ್ ಮೇಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರ್ ನ್ನು ನಿಪಿ 1 ಹಾಗೂ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಪಂಚರಾಗಿ ಬರಲು ಕೋರಿರುವ ನೋಟಿಸಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ನಿಪಿ 1 ಮತ್ತು 2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಓದಿ ತಿಳಿದುಕೊಂಡಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ನ್ಯಾಯಾಲಯದ ಮುಂದಿರುವ ಪ್ಲಾಸ್ಟಿಕ್ ಚೀಲ ಹಾಗೂ ಮದ್ಯದ ಪಾಕೇಟ್ ಗಳ ನ್ನು

ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಬಿಳಿ ಬಟ್ಟೆಯ ಮೇಲೆ ಅಂಟಿಸಿರುವ ಚೀಟಿ ಮೇಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ಬಟ್ಟೆಯನ್ನು ಮು.ಮಾ 1 ಎಂದು ಹಾಗೂ ಸಾಕ್ಷಿ ಸಹಿಯನ್ನು ಮು.ಮಾ 1 ಎ ಎಂದು ಗುರುತಿಸಲಾಯಿತು. ಮು.ಮಾ 1 ರ ಮೇಲೆ ಚುನಾವಾಣೆಯ ಸಂಬಂದ ಊರಿಗೆ ಬಂದಿರುವುದಾಗಿ ತಿಳಿಸಿ ನನ್ನ ಸಹಿ ಪಡೆದಿರುತ್ತಾರೆ. ಅದನ್ನು ಹೊರತುಪಡಿಸಿ ನನಗೇನು ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಮದ್ಯದ ಟೇಟ್ರಾ ಪ್ಯಾಕೇಟ್ ಗಳನ್ನು ನಾನು ಈ ಹಿಂದೆ ನೋಡಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ .

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಶ್ರೀ ಎಪಿಪಿಯವರಿಂದಃ**

ದಿಃ 22.11.2017 ರಂದು ನಾನು ಮಾಯಿಗೌಡನಹಳ್ಳಿ ಬಸ್ ನಿಲ್ದಾಣದ ಹತ್ತಿರ ನಿಂತಿದ್ದಾಗ ಕೆ.ಆರ್.ನಗರದ ಅಬಕಾರಿ ಪೋಲಿಸರು ಅಲ್ಲಿಗೆ ಬಂದು ಮಂಜುನಾಥ ಎಂಬುವವರು ಮನೆಯಲ್ಲಿ ಅಕ್ರಮವಾಗಿ ಮದ್ಯ ಹೊಂದಿ ಮಾರಾಟ ಮಾಡುತ್ತಿದ್ದಾರೆ ಆ ಬಗ್ಗೆ ಮಾಹಿತಿ ಬಂದಿರುತ್ತದೆ. ಸದರಿ ಮನೆಯ ಮೇಲೆ ದಾಳಿ ಮಾಡಿ ಮದ್ಯವನ್ನು ವಶಪಡಿಸಿಕೊಳ್ಳಬೇಕು ಆ ಸಮಯದಲ್ಲಿ ನೀವು ಪಂಚರಾಗಿ ಬರಬೇಕು ಎಂದು ಹೇಳಿರುತ್ತಾರೆ ಅದಕ್ಕೆ ನಾನು ಒಪ್ಪಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೋಲಿಸರು ನಿಪಿ 2 ರಂತೆ ಸ್ಥಳದಲ್ಲಿ ನನಗೆ ನೋಟಿಸ್ ನೀಡಿದ್ದಾರೆ ಎಂದರೆ ಸರಿಯಲ್ಲ. ನಂತರ ಪೋಲಿಸರ ಜೊತೆ ಆರೋಪಿ ಮನೆಯ ಬಳಿ ಹೋದೆವು ಎಂದರೆ ಸರಿಯಲ್ಲ. ಆರೋಪಿ ಮನೆಯ ಬಳಿ ನಿಂತಿದ್ದು ಸಮವಸ್ತ್ರದಲ್ಲಿದ್ದ ಪೋಲಿಸರನ್ನು ನೋಡಿ ಓಡಿಹೋಗಿರುತ್ತಾರೆ ಎಂದರೆ ಸರಿಯಲ್ಲ. ಆತನನ್ನು ಹಿಡಿಯಲು ಪ್ರಯತ್ನಿಸಿದರು ಆರೋಪಿ ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ನಂತರ ಪೋಲಿಸರು ಸ್ಥಳದಲ್ಲಿ ಅಬಕಾರಿ ಕಾಯಿದೆ 54 ರೀತ್ಯಾ ಶೋಧನಾ ಸಮುಚ್ಚಿತ ಆಧಾರವನ್ನು ತಯಾರಿಸಿ ನಮ್ಮ ಮತ್ತು ಪೋಲಿಸರ ಪರಸ್ಪರ ಅಂಗಶೋಧನೆ ಮಾಡಿ ಮದ್ಯಾಹ್ನ 12 ಗಂಟೆ ಸಮಯದಲ್ಲಿ ಆರೋಪಿ ಮನೆ ಪ್ರವೇಶಿಸಿ ನೋಡಿದಾಗ ಆರೋಪಿ ಮನೆಯಲ್ಲಿ ಒಂದು ಪ್ಲಾಸ್ಟಿಕ್ ಬ್ಯಾಗ್ ಇದ್ದು ಅದನ್ನು ಬಿಚ್ಚಿ ನೋಡಿದಾಗ ಅದರಲ್ಲಿ 90 ಎಂ.ಎಲ್ ನ 26 ಒರಿಜಿನಲ್ ಚಾಯ್ಸ ವಿಸ್ಕಿಯ ಟೇಟ್ರಾ ಪ್ಯಾಕೇಟ್ ಗಳು ಇದ್ದವು ಎಂದರೆ ಸರಿಯಲ್ಲ. ನಂತರ ಮನೆಯಲ್ಲಿ ಯಾವುದೇ ಪರವಾನಿಗೆ ಸಿಕ್ಕಿರುವವುದಿಲ್ಲ ಎಂದರೆ ಸರಿಯಲ್ಲ. ನಂತರ ಪೋಲಿಸರು ದೊರೆತ

ಎಲ್ಲ ಮದ್ಯವನ್ನು ಎಫ್.ಎಸ್.ಎಲ್ ವರದಿಗಾಗಿ ಪರೀಕ್ಷೆಗಾಗಿ ಪ್ರತ್ಯೇಕಿಸಿ ಎಲ್ಲ ಮದ್ಯವನ್ನು ಬಿಳಿ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಅವುಗಳ ಮೇಲೆ ಬಿಳಿ ಚೀಟಿ ಅಂಟಿಸಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ಮದ್ಯಾಹ್ನ 2 ರಿಂದ 3 ಗಂಟೆವರೆಗೆ ಪೋಲಿಸರು ಸ್ಥಳದಲ್ಲಿ ನಿಪಿ 1 ರಂತೆ ಮಹಜರ್ ಜರುಗಿಸಿ ನನಗೆ ಓದಿ ತಿಳಿಸಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

2. ಆ ಸಂಬಂದ ದಿಃ 22.11.2017 ರಂದು ಈಗ ಓದಿ ಹೇಳಿದಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸ.ಸ.ಅ ರವರ ಕೋರಿಕೆ ಮೇರಗೆ ಹೇಳಿಕೆಯನ್ನು ನಿಪಿ 3 ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಆರೋಪಿಯ ಮನೆಯ ಮೇಲೆ ದಾಳಿ ನಡೆಸಿ ನಿಪಿ 1 ರಂತೆ ಮಹಜರ್ ಬರೆದು, ಮದ್ಯವನ್ನು ವಶಪಡಿಸಿಕೊಂಡಿದ್ದರೂ ಸಹ ಅದಕ್ಕೆ ನಾನು ನಿಪಿ 1 ಕ್ಕೆ ನಾನು ಸ್ಥಳದಲ್ಲಿ ಸಹಿ ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ